**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ- 13 ಚಾಸಾ- 15

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕೃಷ್ಣ |
| ತಂದೆಯ ಹೆಸರುಃ | : | ಗೋವಿಂದಪ್ಪ |
| ವಯಸ್ಸುಃ | : | 60 ವರ್ಷ |
| ಉದ್ಯೋಗಃ | : | ನಿವೃತ್ತ ಮ್ಯಾನೇಜರ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ(ಕಾರ್ಪೊರೇಷನ್ ಬ್ಯಾಂಕ್) ಕೆ. ಆರ್.ಪುರಂ ಶಾಖೆ, ಹಾಸನ |
| ವಾಸಃ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 21-04-2023ಃ**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2012 ರಿಂದ 2015 ರ ತನಕ ಕಾರ್ಪೊರೇಷನ್ ಬ್ಯಾಂಕ್, ಕೆ ಆರ್ ಪುರಂ ಶಾಖೆ, ಹಾಸನದಲ್ಲಿ ಶಾಖಾ ಪ್ರಬಂಧಕರಾಗಿ ಕೆಲಸ ಮಾಡುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 07.01.2014 ರಂದು ನನಗೆ ಹಾಸನ ಲೋಕಾಯುಕ್ತ ಪೊಲೀಸರಿಂದ ಮಂಜುನಾಥರವರ ಮಗಳು ರಂಜಿತಾ ರವರ ಬ್ಯಾಂಕ್ ಖಾತೆಯ ಬಗ್ಗೆ ಮಾಹಿತಿ ನೀಡುವಂತೆ ಪತ್ರ ಬಂದಿರುತ್ತದೆ. ಅದರಂತೆ ನಾನು ಮರುದಿನ ದಿನಾಂಕ 08.01.2014 ರಂದು ರಂಜಿತಾರವರಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಮಾಹಿತಿ ಬಗ್ಗೆ ಪತ್ರ ನೀಡಿ ಅದರ ಜೊತೆಯಲ್ಲಿ ಅವರ ಬ್ಯಾಂಕ್ ಖಾತೆಯ ಅಕೌಂಟ್ ಸ್ಟೇಟ್

ಮೆಂಟ್ ಎಕ್ಸ್ಟ್ರ್ಯಾಕ್ಟ್ ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈಗ ತೋರಿಸಿದ ದಾಖಲೆಯು ನಾನು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಪತ್ರ ಮತ್ತು ರಂಜಿತಾರವರ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟ್ ಎಕ್ಸ್ಟ್ರ್ಯಾಕ್ಟ್ ಆಗಿರುತ್ತದೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ.90 ಮತ್ತು ನಿಶಾನೆ ಪಿ.91 ಎಂದು ಮತ್ತು ಅವುಗಳಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.90(ಎ) ಮತ್ತು ನಿಶಾನೆ ಪಿ.91(ಎ) ಎಂದು ಅನುಕ್ರಮವಾಗಿ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಜಿ. ವಕೀಲರಿಂದ ಶ್ರೀ ಸಿ.ಎನ್.ವಿ ವಕೀಲರ ಪರವಾಗಿಃ</u>**

ಯಾವುದೇ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್ ಎಕ್ಸ್ಟ್ರ್ಯಾಕ್ಟ್ ನೀಡಬೇಕಾದರೆ ಅದನ್ನು ದೃಢೀಕರಿಸಬೇಕು ಎನ್ನುವುದು ಸರಿ. ನಿಶಾನೆ ಪಿ.91 ದಾಖಲೆಯನ್ನು ನಾನು ದೃಢೀಕರಿಸಿ ಕೊಟ್ಟಿರುತ್ತೇನೆ. ಆರೋಪಿಯ ಮಗಳು ರಂಜಿತಾರಿಗೆ ಸಂಬಂಧಪಟ್ಟಂತೆ ನಾನು ಲೋಕಾಯುಕ್ತ ಪೊಲೀಸರಿಗೆ ನಿಶಾನೆ ಪಿ.90 ಮತ್ತು ನಿಶಾನೆ ಪಿ.91 ರಂತೆ ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**